ವಿಸ್ತರಿಸಲು ೧೯೭೧ನೇ ಇಸವಿಯ ಕರ್ನಾಟಕ ಚಲನಚಿತ್ರ (ನಿಯಂತ್ರಣ) ನಿಯಮಗಳ ೨೮ (೧) ಹಾಗೂ (೨) ಹಾಗೂ ೩೬ನೇ ನಿಯಮಗಳಿಂದ ವಿನಾಯಿತಿ ನೀಡುವುದಕ್ಕೆ ಸಂಬಂಧಿಸಿದಂತೆ ದಿನಾಂಕ ೧೬-೧೨-೮೯ ರಂದು ಹೊರಡಿಸಲಾದ ಹೆಚ್‌ಡಿ ೧೮೨ ಸಿಎನ್‌ಎ ೮೯ನೇ ಕ್ರಮಾಂಕದ ಅಧಿಸೂಚನೆಯನ್ನು ಸಭೆಯ ಮುಂದಿಡುತ್ತೇನೆ.

೨. ಶ್ರೀ ಟಿ. ಎನ್. ನರಸಿಂಹಮೂರ್ತಿ (ಬಂದರು, ಮಿನಾನುಗಾರಿಕೆ ಹಾಗೂ ವಸತಿ ಮತ್ತು ನಗರಾಭಿವೃದ್ಧಿ ಮಂತ್ರಿಗಳು).—

೮) ೧೯೮೯ನೇ ಇಸವಿಯ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರ ಕಾಯ್ದೆಯ ೪೮ (೫)ನೇ ಕಲಮಿನ ಮೇರೆಗೆ—

೧೯೮೬-೮೭ನೇ ಸಾಲಿಗೆ ಸಂಬಂಧಿಸಿದಂತೆ (೧) ಹುಬ್ಬಳ್ಳಿ-ಧಾರವಾಡ (೨) ಹಾಸನ (೩) ಬಿಜಾಪುರ ಹಾಗೂ (೪) ದಾವಣಗೆರೆ ನಗರಾಭಿವೃದ್ಧಿ ಪ್ರಾಧಿಕಾರಗಳ ಲೆಕ್ಕ ಪರಿಶೋಧನಾ ವರದಿ.

೮) ೧೯೭೫ನೇ ಇಸವಿಯ ಕರ್ನಾಟಕ ನಗರ ನೀರು ಸರಬರಾಜು ಹಾಗೂ ಒಳಚರಂಡಿ ಲೆಕ್ಕ ನಿಯಂತ್ರಣಗಳ ೭ (೮) ನಿಯಮದ ಮೇರೆಗೆ—

೧೯೮೭-೮೮ನೇ ಸಾಲಿಗೆ ಸಂಬಂಧಿಸಿದಂತೆ ಕರ್ನಾಟಕ ನಗರ ನೀರು ಸರಬರಾಜು ಹಾಗೂ ಒಳ ಚರಂಡಿ ಮಂಡಳಿಯ ಲೆಕ್ಕಪತ್ರ ಹಾಗೂ ಲೆಕ್ಕ ಪರಿಶೋಧನಾ ವರದಿಗಳನ್ನು ಸಭೆಯ ಮುಂದಿಡುತ್ತೇನೆ.

೩. ಶ್ರೀ ಟಿ. ಎನ್. ನರಸಿಂಹಮೂರ್ತಿ (ಬಂದರು, ಮಿನಾನುಗಾರಿಕೆ ಹಾಗೂ ವಸತಿ ಮತ್ತು ನಗರಾಭಿವೃದ್ಧಿ ಮಂತ್ರಿಗಳು) ಶ್ರೀ ಬಿ ಶಿವಣ್ಣ (ಸಮಾಜ ಕಲ್ಯಾಣ, ಕಾರ್ಮಿಕ, ರೇಷ್ಮೆ ಗಣಿ ಮತ್ತು ಭೂವಿಜ್ಞಾನ ಮಂತ್ರಿಗಳು) ಅವರ ಪರವಾಗಿ.—

೧೯೫೬ನೇ ಇಸವಿಯ ಕಂಪನಿಗಳ ಕಾಯ್ದೆಯ ೬೧೯ (೮) ಕಲಮಿನ ಮೇರೆಗೆ—

೧೯೮೮-೮೯ನೇ ಸಾಲಿಗೆ ಸಂಬಂಧಿಸಿದಂತೆ ಕರ್ನಾಟಕ ರೇಷ್ಮೆ ಕೈಗಾರಿಕಾ ನಿಯಮಿತದ ೯ನೇ ವಾರ್ಷಿಕ ವರದಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

೪. ಶ್ರೀ ಟಿ. ಎನ್. ನರಸಿಂಹಮೂರ್ತಿ (ಬಂದರು, ಮಿನಾನುಗಾರಿಕೆ ಹಾಗೂ ವಸತಿ ಮತ್ತು ನಗರಾಭಿವೃದ್ಧಿ ಮಂತ್ರಿಗಳು) ಶ್ರೀ ಎ. ವೀರಪ್ಪ ಮೊಯ್ಲಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳು, ಯೋಜನೆ, ವಾರ್ತಾ, ಪ್ರವಾಸೋದ್ಯಮ ಹಾಗೂ ಯುವಜನ ಸೇವೆಗಳು, ವಾಣಿಜ್ಯ ಮತ್ತು ಕೈಗಾರಿಕಾ ಮಂತ್ರಿಗಳು) ಅವರ ಪರವಾಗಿ.—

೧೯೮೮-೮೯ನೇ ಸಾಲಿಗೆ ಸಂಬಂಧಿಸಿದಂತೆ ಮೈಸೂರು ಕಾಸ್‌ಮೆಟಿಕ್ಸ್ ನಿಯಮಿತದ ೨೩ನೇ ವಾರ್ಷಿಕ ವರದಿಯನ್ನು ಸಭೆಯ ಮುಂದಿಡುತ್ತೇನೆ.

ಅಧ್ಯಕ್ಷರು,— ಕಾಗದ ಪತ್ರಗಳನ್ನು ಸಭೆಯ ಮುಂದಿಡಲಾಯಿತು.

ಅರ್ಜಿಯನ್ನೊಪ್ಪಿಸುವುದು

ಶ್ರೀ ಕೆ. ಕುಶಾಲ (ಸುಳ್ಯ),— ಮಾನ್ಯ ಅಧ್ಯಕ್ಷರೆ, ಕರ್ನಾಟಕ ರಾಜ್ಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ ಆಯೋಗ ರಚಿಸುವ ಬಗ್ಗೆ ಅರ್ಜಿಯನ್ನೊಪ್ಪಿಸುತ್ತೇನೆ.

ಅಧ್ಯಕ್ಷರು.— ಅರ್ಜಿಯನ್ನು ಒಪ್ಪಿಸಲಾಯಿತು.

ನಿಲುವಳಿ ಸೂಚನೆ ಮಂಡನೆಗೆ ಅನುಮತಿ ಕೋರಿಕೆ

ಗಂಧದ ಕಳ್ಳಸಾಗಾಣಿಕೆದಾರ, ಆನೆಗಳ ಹಂತಕ ವೀರಪ್ಪನ್‌ನನ್ನು ಹಿಡಿಯುವ ಬಗ್ಗೆ

ಶ್ರೀ ಡಿ.ಬಿ. ಚಂದ್ರೇಗೌಡ.—ಮಾನ್ಯ ಅಧ್ಯಕ್ಷರೆ, ನಾನು ೪೯ನೇ ನಿಯಮಾವಳಿ ಕೆಳಗೆ ಒಂದು ನಿಲುವಳಿ ಸೂಚನೆ ಕಳಿಸಿದ್ದೇನೆ. ಬಹಳ ಮುಖ್ಯವಾದ ವಿಷಯ ಎತ್ತುತ್ತಿದ್ದೇವೆ.

ಅಧ್ಯಕ್ಷರು.—ಇಲ್ಲಿ ಕೇಳಿ, ತಾವು ಒಂದು ನಿಲುವಳಿ ಸೂಚನೆಯನ್ನು ಈ ದಿವಸ ಬೆಳಿಗ್ಗೆ ೧೦.೧೫ಕ್ಕೆ ವಿಧಾನಮಂಡಲದ ಕಚೇರಿಗೆ ತಲುಪಿಸಿದ್ದೀರಿ ೪೯ನೇ ನಿಯಮ ಏನು ಹೇಳುತ್ತದೆ ಎಂದರೆ...

(ಗದ್ದಲ)